ಅಧ್ಯಕ್ಷರು : ಯಡಿಯೂರಪ್ಪನವರೇ,

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಸ್ವಲ್ಪ ಅವಕಾಶ ಕೊಡಿ ಸಾರ್.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳೇ, ತಾವು ಯಾವಾಗಲೂ ಶಾಂತವಾಗಿಯೇ ಇದ್ದೀರಿ. ಇವೊತ್ತು ಏಕೆ ಆವೇಶ ಮಾಡಿಕೊಂಡರೋ ಗೊತ್ತಿಲ್ಲ.

ಶ್ರೀ ಧರ್ಮಸಿಂಗ್ : ಆವೇಶ ಮಾಡಿಕೊಳ್ಳುವ ಹಾಗೆ ಮಾಡಿದರಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದ್ನಿಮಿಷ. ಈ ಕಡೆ ನಮ್ಮ ಶಾಸಕರುಗಳ ಅಭಿಪ್ರಾಯವೇನೆಂದರೆ, ಅನೇಕ ಬಾರಿ ಮಾನ್ಯ ಮಾಧುಸ್ವಾಮಿಯವರು, ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ನಾನು ಮತ್ತು ಅನೇಕ ಸದಸ್ಯರು ಈ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಶಾಸಕರ ಅಧ್ಯಕ್ಷತೆಯಲ್ಲಿ ಸಭೆ ಸಮಾರಂಭಗಳು ನಡೆಯಬೇಕು ಎಂಬುದು ಸಕ್ಸಂಪ್ರದಾಯ. ಆದರೆ ಅಧಿಕಾರಿಗಳು ಈ ರೀತಿ ಇರುವ ನೀತಿ ನಿಯಮಗಳನ್ನು ಮೀರಿ ಯಾವುದೋ ಪ್ರಭಾವಕ್ಕೆ ಒಳಗಾಗಿ ಅವರದೇ ಆದ ರೀತಿಯಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಇನ್ನು ಮುಂದೆ ಒಂದು ಸುತ್ತೋಲೆ ಅಗತ್ಯವಿಲ್ಲ ಸಾರ್. ಈ ಬಗ್ಗೆ ಈಗಾಗಲೇ ಬೇಕಾದಷ್ಟು ಸುತ್ತೋಲೆಗಳು ಹೋಗಿವೆ. ಎರಡ್ಮೂರು ಇಂಥ ಘಟನೆಗಳು ನಡೆದಿರುವ ಕಡೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡರೆ, ಸರ್ಕಾರಿ ಕಾರ್ಯಕ್ರಮಗಳು ಶಾಸಕರ ಅಧ್ಯಕ್ಷತೆ ಇಲ್ಲದೇ ನಡೆಯುವುದಕ್ಕೆ ಬಿಡುವುದಿಲ್ಲವೆಂದು ನೀವು ಹೇಳಿದರೆ ಅದೊಂದು ಸೂಚನೆ ಎಂದು ತಿಳಿದುಕೊಂಡು ಅದನ್ನು ಅಧಿಕಾರಿಗಳು ಪರಿಪಾಲನೆ ಮಾಡುತ್ತಾರೆ. ಆದುದರಿಂದ ಈ ಬಗ್ಗೆ ತಾವು ವಿಶೇಷವಾದ ಗಮನವನ್ನು ಕೊಡಿ ಎಂದು ನಾನು ಕೇಳಿಕೊಳ್ಳುತ್ತಿರುವುದು. ಇನ್ನೊಮ್ಮೆ ಈ ವಿಷಯ ಪ್ರಸ್ತಾಪ ಮಾಡಲು ತಾವು ಅವಕಾಶ ಮಾಡಿಕೊಳ್ಳದ ಹಾಗೆ ಕ್ರಮ ತೆಗೆದುಕೊಳ್ಳಬೇಕು ಎಂಬುದು ನನ್ನ ಮನವಿ. ಈ ವಿಷಯದ ಚರ್ಚೆ ಇಂದೇ ಕೊನೆಯಾಗಲಿ.

ಶ್ರೀ ಧರ್ಮಸಿಂಗ್ : ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಿದ್ದಾರೆ. ಏನ್ನೋ ಅಲ್ಲಿ, ಇಲ್ಲಿ ರೇರ್ ಆಗಿ ಆಗಿರಬಹುದು.

ಶ್ರೀ ಜಗದೀಶ್ ಶೆಟ್ಟರ್ : ಇಲ್ಲಾ ಸಾರ್, ಎಲ್ಲಾ ಕಡೆ ಆಗುತ್ತಿದೆ.

ಶ್ರೀ ಧರ್ಮಸಿಂಗ್ : ಎಲ್ಲಾ ಕಡೆ ಆಗುತ್ತಿದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಅದು ಹೇಗೆ ಎಲ್ಲಾ ಕಡೆ ಈ ರೀತಿ ಆಗುತ್ತದೆ? ನಾನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮತ್ತೊಮ್ಮೆ ಆದೇಶ ಕೊಡುತ್ತೇನೆ. ಎಲ್ಲಾದರೂ ಕೂಡ ಈ ರೀತಿಯ ಉಲ್ಲಂಘನೆ ಆದರೆ ಅದರ ಬಗ್ಗೆ ನೋಡುತ್ತೇನೆ. ಅದು ಎಲ್ಲೇ ಆಗಿರಲಿ ಉಲ್ಲಂಘನೆ ಆಗಿದ್ದರೆ ನೋಡುತ್ತೇನೆ. ಎಲ್ಲಾ ಕ್ಷೇತ್ರಗಳಲ್ಲೂ ಸರ್ಕಾರಿ ಕಾರ್ಯಕ್ರಮಗಳು ಶಾಸಕರ ಅಧ್ಯಕ್ಷತೆಯಲ್ಲಿಯೇ ಆಗಬೇಕು ಎಂದು ಮತ್ತೊಮ್ಮೆ ಸುತ್ತೋಲೆಯನ್ನು ಹೊರಡಿಸಿ ಇದು ಆಗಲಾರದಂತೆ ನೋಡಿಕೊಳ್ಳುವ ಭರವಸೆಯನ್ನು ನಾನು ಕೊಡುತ್ತೇನೆ.

ಊ) ವಿಷಯ: ರಾಜ್ಯದಲ್ಲಿ ಹೆಣ್ಣು ಮಕ್ಕಳ ಜನನದ ಅನುಪಾತ ಇಳಿಮುಖವಾಗುತ್ತಿರುವ ಬಗ್ಗೆ.

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಆರು ವರ್ಷದೊಳಗಿನ ಹೆಣ್ಣು ಮಕ್ಕಳ ಜನನದ ಅನುಪಾತ 1000ಕ್ಕೆ 949 ಕ್ಕೆ ಇಳಿದಂಥ ಈ ಸಂದರ್ಭದಲ್ಲಿ ಈ ಬಗ್ಗೆ ನಾವು ಗಂಭೀರವಾಗಿ ಆಲೋಚನೆಯನ್ನು ಮಾಡಬೇಕಾಗಿದೆ. ಈಗ

ಸ್ಕ್ಯಾನಿಂಗ್ ಮಾಡುವ ಈ ಪರಿಸ್ಥಿತಿಯಲ್ಲಿ ಎಲ್ಲಾ ಕಡೆ ಹೆಣ್ಣು ಮಗು ಹುಟ್ಟುವುದು ಎಂದು ಗೊತ್ತಾದಾಗ ಅದನ್ನು ಭ್ರೂಣಾವಸ್ಥೆಯಲ್ಲಿಯೇ ಹತ್ಯೆ ಮಾಡುವಂಥ ಘಟನೆಗಳು ಎಲ್ಲಾ ಕಡೆ ನಡೆಯುತ್ತಿರುವ ವಿಚಾರಗಳು ನಮಗೆ ತಿಳಿಯುತ್ತಿದೆ. ಎರಡು ಕಾರಣಗಳಿಂದ ಆಗುತ್ತಿದೆ. ಇಂದು ವೈಜ್ಞಾನಿಕ ತಂತ್ರಜ್ಞಾನದ ಉಪಯೋಗ ಕೂಡ ಈ ರೀತಿ ಆಗಲು ಕಾರಣವಾಗಿದೆ. ಇನ್ನು ನನಗೆ ಲಿಖಿತ ಉತ್ತರದಲ್ಲಿ, 2002 ರಿಂದ 2004 ರವರೆಗೆ 1659 ಮಹಿಳೆಯರ ಹತ್ಯೆ ನಡೆದಿದೆ. ಅದೇ ರೀತಿ 2004 ರಲ್ಲಿ 919 ಅತ್ಯಾಚಾರಗಳು ನಡೆದಿವೆ. ಇದು ಅತ್ಯಾಚಾರ ದಾಖಲಾದಂಥ ವಿಚಾರಗಳು. ಅತ್ಯಾಚಾರ ಸಾಮಾನ್ಯವಾಗಿ ದಾಖಲು ಆಗುವುದು ಎಲ್ಲಾ ಕಡೆ ಕಡಿಮೆ. ಈ ವಿಚಾರವನ್ನು ನೋಡಿದಾಗ ತಂದೆ ತಾಯಿ ಹೆಣ್ಣು ಮಕ್ಕಳನ್ನು ಭ್ರೂಣಾವಸ್ಥೆಯಲ್ಲಿಯೇ ಹತ್ಯೆ ಮಾಡುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಸರ್ಕಾರದ ಗಮನಕ್ಕೆ 2001ರ ಜನಗಣತಿಯ ಅನುಪಾತ ಸಿಕ್ಕಿದರೂ ಕೂಡ 8 ತಿಂಗಳುಗಳಿಂದ ಆ ಬಗ್ಗೆ ಯಾವುದೇ ಅಡ್‌ವೈಸರಿ ಕಮಿಟಿ ಮೀಟಿಂಗ್‌ನ್ನು ಕರೆದು ಆ ಬಗ್ಗೆ ಯಾವುದೇ ತೀರ್ಮಾನವನ್ನು ತೆಗೆದುಕೊಂಡಿಲ್ಲ. ಅಥವಾ ಅದನ್ನು ನಿಲ್ಲಿಸುವ ಬಗ್ಗೆ ಚರ್ಚೆ ನಡೆಯಲಿಲ್ಲ. ಇದನ್ನು ನಾವು ಗಂಭೀರವಾಗಿ ಆಲೋಚನೆಯನ್ನು ಮಾಡಬೇಕಾಗಿದೆ. ಮೊನ್ನೆ ಎರಡ್ಮೂರು ದಿನಗಳ ಹಿಂದೆ ನಮ್ಮ ಬೆಂಗಳೂರು ಕಂಟೋನ್‌ಮೆಂಟ್ ರೈಲ್ವೆ ಸ್ಟೇಶನ್‌ನಲ್ಲಿ ಹೆಣ್ಣುಮಕ್ಕಳ ಮಾರಾಟಕ್ಕೆ ಪ್ರಯತ್ನ ಪಡುತ್ತಿದ್ದವರನ್ನು ರೈಲ್ವೆ ಪೋಲಿಸರು ಹಿಡಿದು ಬಂಧಿಸಿದರು. ಇಂಥ ಪ್ರಕರಣಗಳು ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳಷ್ಟು ನಡೆಯುತ್ತಿದೆ. ಸಣ್ಣ ಹೆಣ್ಣುಮಕ್ಕಳನ್ನು ವಿದೇಶಕ್ಕೆ ಮಾಥಾಟ ಮಾಡುತ್ತಿದ್ದಾರೆ. ಅದೇ ರೀತಿ ಯುವತಿಯರನ್ನೂ ಮಾರಾಟ ಮಾಡುತ್ತಿದ್ದಾರೆ. ಆದರೆ ಸರ್ಕಾರ ತನ್ನ ಗಮನಕ್ಕೆ ಬಂದಿದೆ ಎಂದು ಮಾತ್ರ ಹೇಳುತ್ತಿದೆ. ಆದರೆ ಬಹಳಷ್ಟು ನೋವಾಗುವ ವಿಚಾರವೆಂದರೆ ಇದನ್ನು ತಡೆಗಟ್ಟುವುದಕ್ಕೆ ಯಾವ ವ್ಯವಸ್ಥೆಯನ್ನು ಕೈಗೊಂಡಿದೆ? ನಾನು ಇಂದು ಕಳಕಳಿಯಿಂದ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಯಾವುದೇ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ನಡೆದಾಗ, ಶೋಷಣೆ ನಡೆದಾಗ, ಮಾರಾಟ ನಡೆದಾಗ, ಅದರ ಬಗ್ಗೆ ಸರ್ಕಾರ ಹೆಚ್ಚಿನ ಕಾಳಜಿ ವಹಿಸಿ ಇಂಥ ಕೃತ್ಯ ಮಾಡಿದವರನ್ನು ಕಂಡುಹಿಡಿದು ಅವರನ್ನು ಶಿಕ್ಷೆಗೆ ಒಳಪಡಿಸಬೇಕು. ಹೀಗೆ ಮಾಡಿದರೆ ಮಾತ್ರ ಹೆಣ್ಣು ಮಕ್ಕಳು ಉಳಿಯುವುದಕ್ಕೆ ಸಾಧ್ಯ. ಇಂದು ಗಂಡಸರಿಂದ ಹೆಂಗಸರ ಪ್ರಮಾಣ ಜಾಸ್ತಿಯಾಗಿದ್ದಾಗ ಇಂಥ ದೌರ್ಜನ್ಯಗಳು ಹೆಚ್ಚು ನಡೆಯುತ್ತಿರುವಾಗ ಮುಂದೆ ಗಂಡಸರ ಸಂಖ್ಯೆಗಿಂತ ಹೆಂಗಸರ ಸಂಖ್ಯೆ ಇನ್ನೂ ಕಡಿಮೆಯಾದಾಗ ಎಲ್ಲಾ ರೀತಿಯ ಪೈಶಾಚಿಕ ಕೃತ್ಯಗಳು ಬಹಳಷ್ಟು ನಡೆಯುವ ಸಾಧ್ಯತೆ ಇರುವುದರಿಂದ ಈಗಲೇ ಹೆಣ್ಣು ಮಕ್ಕಳ ಜನನ ಪ್ರಮಾಣ ಹೆಚ್ಚುವ ಹಾಗೆ ಮಾಡಲು ಯಾವುದೇ ಆಸ್ಪತ್ರೆಗಳಲ್ಲಿ ಭ್ರೂಣ ಹತ್ಯೆಯನ್ನು ಸಂಪೂರ್ಣ ನಿಷೇಧಿಸುವಂಥ ಕಾನೂನನ್ನು ಜಾರಿಗೆ ತರಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಇದಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರು ಉತ್ತರ ಕೊಡಬೇಕಾಗಿತ್ತು. ಅವರು ತಮ್ಮ ಪರವಾನಗಿಯನ್ನು ಪಡೆದುಕೊಂಡು ಹೋಗಿದ್ದಾರೆ.

ಕರ್ನಾಟಕ ರಾಜ್ಯಕ್ಕೆ ಬೇರೆ ಬೇರೆ ರಾಜ್ಯಗಳಿಂದ ಮಕ್ಕಳು ಮತ್ತು ಮಹಿಳೆಯರನ್ನು ವಿವಿಧ ಉದ್ದೇಶಗಳಿಗಾಗಿ ಸಾಗಣೆಗೊಳಗಾಗಿ ಬರುತ್ತಿದ್ದಾರೆ. ಕರ್ನಾಟಕದಿಂದ ಮುಂಬಯಿ, ದೆಹಲಿ ಮತ್ತು ವಿದೇಶಗಳಿಗೂ ಮಕ್ಕಳು ಮತ್ತು ಮಹಿಳೆಯರನ್ನು ಸಾಗಿಸುವ ಪ್ರಕರಣಗಳು ತಿಳಿದುಬಂದಿವೆ. ಆದರೆ ಈ ಬಗ್ಗೆ ಯಾವುದೇ ಅಂಕಿ ಅಂಶಗಳು ಅಥವಾ ದಾಖಲೆಗಳು ಲಭ್ಯವಿಲ್ಲ.

ಮಕ್ಕಳ ಸಾಗಣೆಯ ವ್ಯಾಪ್ತಿ ಮತ್ತು ಅದರ ವಿವಿಧ ರೂಪಗಳ ಗಂಭೀರತೆಯು ಸರ್ಕಾರಕ್ಕೆ ಅರಿವಾಗಿ ಈ ಪಿಡುಗನ್ನು ತಡೆಗಟ್ಟಲು ಸರ್ಕಾರವು ಯೂನಿಸೆಫ್‌ನ ನೆರವಿನೊಂದಿಗೆ ಕ್ರಿಯಾ ಯೋಜನೆಯನ್ನು ತಯಾರಿಸಿದೆ.

ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಯೂನಿಸೆಫ್ ನ ಸಹಯೋಗದೊಂದಿಗೆ ಮಕ್ಕಳ ಸಾಗಣೆ ವಿರುದ್ಧ ಸಮಾಜದಲ್ಲಿ ಅರಿವು ಮೂಡಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಡಿಸೆಂಬರ್ 2004 ಮತ್ತು ಜನವರಿ 2005ರಲ್ಲಿ ವ್ಯಾಪಕ ಪ್ರಚಾರಾಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲೆಯ ಎಲ್ಲಾ ಪ್ರಮುಖ ಇಲಾಖೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಪಾಲ್ಗೊಂಡಿರುತ್ತವೆ.

ಕರ್ನಾಟಕ ರಾಜ್ಯದಲ್ಲಿ ಆರು ವರ್ಷದೊಳಗಿನ ಹೆಣ್ಣು ಮಕ್ಕಳು ಜನನದ ಅನುಪಾತ 1991ರಲ್ಲಿ 960 ಇದ್ದು, 2001ರ ಜನಗಣತಿಯಂತೆ ಜನನದ ಅನುಪಾತ 949 ಇರುತ್ತದೆ.

ಗಂಡು ಮಕ್ಕಳ ಜನನಕ್ಕೆ ನೀಡುತ್ತಿರುವ ಹೆಚ್ಚಿನ ಆದ್ಯತೆ ಹೆಣ್ಣುಮಕ್ಕಳ ಜನನದ ಕ್ಷೀಣತೆಗೆ ಕಾರಣವಾಗಿದೆಯೆಂದು ಊಹಿಸಲಾಗಿದೆ. ಆದರೆ ಈ ಬಗ್ಗೆ ಯಾವುದೇ ಸಮೀಕ್ಷೆ ಕೈಗೊಂಡಿರುವುದಿಲ್ಲ. ಆದಾಗ್ಯೂ ಇದನ್ನು ತಡೆಗಟ್ಟಲು PNDT (Prenatal Diagnostie Technique) ಕಾಯ್ದೆಯನ್ನು ಜಿಲ್ಲಾ ಮಟ್ಟಗಳಲ್ಲಿ ಸಮಿತಿ ರಚಿಸಿ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. ಹೆಣ್ಣು ಭ್ರೂಣ ಹತ್ಯೆಯ ಪಿಡುಗನ್ನು ತಡೆಗಟ್ಟಲು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ. ವಿಮೋಚನಾ, ಬೆಂಗಳೂರು ಸಂಸ್ಥೆಯು ಯೂನಿಸೆಫ್‌ನ ಆರ್ಥಿಕ ನೆರವಿನೊಡನೆ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದಲ್ಲದೇ ಈ ಒಂದು ದೊಡ್ಡ ಪಿಡುಗಿನ ಸಮಸ್ಯೆ ಬಗೆಹರಿಯಬೇಕಾದರೆ ಸಮಾಜದಲ್ಲಿ ಜಾಗೃತಿ ಆಗಬೇಕು. ಸಮಾಜದಲ್ಲಿ ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಗೌರವ ಸಿಗುವಂತೆ ವರ್ತನೆ ಮಾಡತಕ್ಕಂಥ ಮನೋಭಾವ ಮೂಡಿಸುವಲ್ಲಿ ಈ ಸದನ ಹಾಗೂ ಸಮಾಜದ ಎಲ್ಲಾ ಗಣ್ಯರೂ ಕೂಡ ಪ್ರಯತ್ನಿಸಬೇಕಾಗಿದೆ.

10. ಪ್ರಕಟಣೆ

ಅಧ್ಯಕ್ಷರು : ಘನತೆವೆತ್ತ ರಾಜ್ಯಪಾಲರು ನಿನ್ನೆಯ ದಿನ ಏರ್ಪಡಿಸಿದ್ದ ಚಹಾ ಕೂಟವನ್ನು ಈ ದಿನ ಸಂಜೆ ಆರು ಗಂಟೆಗೆ ಏರ್ಪಡಿಸಿರುತ್ತಾರೆಂದು ತಿಳಿಸಿರುತ್ತಾರೆ. ಆದುದರಿಂದ ಮಾನ್ಯ ಸದಸ್ಯರು ಸದರಿ ಸಮಾರಂಭದಲ್ಲಿ ಪಾಲ್ಗೊಳ್ಳಬೇಕೆಂದು ಈ ಮೂಲಕ ತಮ್ಮನ್ನು ಕೋರುತ್ತೇನೆ. ಈಗ ಸದನವನ್ನು 2.30ರವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1 ಗಂಟೆ 37 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ ಭೋಜನಾ ವಿರಾಮದ ನಂತರ 2 ಗಂಟೆ 30 ನಿಮಿಷಕ್ಕೆ ಪುನರ್‌ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 2.53ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

11. ಶಾಸನ ರಚನೆ

ಅಧ್ಯಕ್ಷರು : ಈಗ ಶಾಸನ ರಚನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಿ. ಆಮೇಲೆ ಅದನ್ನು ತೆಗೆದುಕೊಳ್ಳಬಹುದು. ಎರಡು ಗಮನ ಸೆಳೆಯುವ ಸೂಚನೆಗಳಿವೆ. ಅವೆರಡನ್ನು ಮುಗಿಸೋಣ.